ಪ್ರಿಯರು, ಬುದ್ಧಿಜೀವಿಗಳ ಮಧ್ಯೆ ಸೀರಿಯಸ್ ಚರ್ಚೆಗಳು ನಡೆದಿವೆ. ನನಗನಿಸುವಂತೆ ಮನುಷ್ಯ ಕಾಡನ್ನು ಅತಿಕ್ರಮಿಸುತ್ತಿದ್ದಾನೆ.

ವಾರಕ್ಕೊಮ್ಮೆ ಹೆಂಡತಿ ಮಕ್ಕಳೊಂದಿಗೆ ಕಾಡಿಗೆ ಹೋಗಿ ಎಣ್ಣೆ ಹಾಕಿ, ಪಿಜ್ಜಾ, ಬರ್ಗರ್ರು, ಮಾಂಸ ತಿಂದು ಹೆಚ್ಚಾಗಿದ್ದನ್ನು ಎಸೆದು ಬರುತ್ತಿದ್ದಾನೆ. ಚಿರತೆಗಳಿಗೆ ಈ ಜಂಕ್ ಫುಡ್ಡಿನ ಆಕರ್ಷಣೆ ಹೆಚ್ಚಾಗಿರಬಹುದು. ಸಾಲದ್ದಕ್ಕೆ ಚಾರಣ, ಫಾರೆಸ್ಟ್ ಬಾತ್ (ಅರಣ್ಯಸ್ನಾನ) ಎಂದೆಲ್ಲಾ ಜನ ಎಗ್ಗಿಲ್ಲದೆ ಕಾಡಿಗೆ ನುಗ್ಗುತ್ತಾರೆ. ರಾಜಕೀಯದವರು ತಮ್ಮ ಉತ್ಸವ ಮಾಡಿಸಿಕೊಂಡು ಮೆರೆಯುವ ಜೊತೆಗೆ ಈಗ ಕಾಡು ಉತ್ಸವ, ನದಿ ಉತ್ಸವ, ಅಣೆಕಟ್ಟೆಗಳಿಗೆ ಬಾಗಿನ, ಕಾವೇರಿ ಆರತಿ ಎಂದು ಕಾಡಲ್ಲೂ ಬ್ಯಾಂಡು ಬಡಿದುಕೊಂಡು ಉತ್ಸವ ಮಾಡಲು ಹೊರಟಿದ್ದಾರೆ. ಸ್ವಚ್ಛಂದವಾಗಿ ಹರಿದು ಧುಮ್ಮಿಕ್ಕುವ ಜಲಪಾತವನ್ನೂ ರಾಜಕೀಯದವರು ಸುಮ್ಮನೆ ಬಿಟ್ಟಿಲ್ಲ. ಸದ್ದಿಲ್ಲದೆ ಕರೆಂಟ್ ತೆಗೆಯುತ್ತಿದ್ದವರು ಈಗ ಬಾಜಾಬಜಂತ್ರಿ ಬಡಿದುಕೊಂಡು ಉತ್ಸವ ತೆಗೆಯುತ್ತಿದ್ದಾರೆ.

ಮೊದಲೇ ಕಾಡುಗಳ್ಳರಿಂದ ರೋಸಿ ಹೋಗಿರುವ ಕಾಡು ಪ್ರಾಣಿಗಳಿಗೆ ಈ ಶೋಕಿ ಜನರ ಕಾಟ ಹೇಳತೀರದಾಗಿರಬಹುದು. ಹಾಗಾಗಿ ಅವೂ ಊರಿನ ಕಡೆ ನುಗ್ಗುತ್ತಿವೆ. ಹಿಂದಿನಂತೆ ತಮ್ಮನ್ನು ಹಿಡಿದು ಸರ್ಕಸ್ ಕಂಪನಿಯವರು ತಾಲೀಮು ಕಲಿಸಿ ಜನರ ಮುಂದೆ ಕೈ ಕಾಲೆತ್ತಿ ದೊಂಬರಾಟ ಕುಣಿಸುವ, ಬಾಲು ಒದೆಸುವ ಚಾಕರಿ ಮಾಡಿಸುತ್ತಾರೆ ಎಂಬ ಭಯವೇನೂ ಚಿರತೆಗಳಿಗಿಲ್ಲ. ನಿಜವಾದ ಸಮಾನತೆ ಇದ್ದದ್ದೇ ಸರ್ಕಸ್ನಲ್ಲಿ! ಅಲ್ಲಿ ಹುಲಿಯೂ ಒಂದೇ! ಸಿಂಹವೂ ಒಂದೇ! ಚಿರತೆ, ಆನೆ ಎಲ್ಲವೂ ಒಂದೇ! ಎಲ್ಲಾ ತಮ್ಮ ಒರಿಜಿನಲ್ ಸ್ವಭಾವ ಮರೆತು ವಿಧೇಯ ಗಂಡಂದಿರಂತೆ ರಿಂಗ್ ಮಾಸ್ಟರ್ ಹೇಳಿದ ಕೆಲಸ ಮಾಡಿಕೊಂಡಿರುವುದು. ಅಲ್ಲಿನ ಸುಂದರ ಹುಡುಗಿಯರು ತಮ್ಮ ಮೇಲೆ ಕೂತು ರೈಡ್ ಮಾಡುವ ಕತೆಯನ್ನು ತಾತಂದಿರಿಂದ ಕೇಳಿದ್ದ ಜೆಡ್ ಜನರೇಷನ್ ಚಿರತೆಗಳಿಗೆ ಸರ್ಕಸ್ ಕಂಪನಿಗಳೇ ಮುಚ್ಚಿಹೋಗಿವೆ ಎಂದು ತಿಳಿದು ಒಂದಿಷ್ಟು ಬೇಜಾರು ಆಗಿದ್ದರೂ ಇರಬಹುದು. ಇನ್ನು ಅಕಸ್ಮಾತ್ ಸಿಕ್ಕಿಬಿದ್ದರೆ ಅರೆಸ್ಟ್ ಆದ ಅರ್ಧಗಂಟೆಯಲ್ಲೇ ರಿಲೀಸ್ ಆಗುವ ಚಳುವಳಿಕಾರರಂತೆ ಇಲ್ಲಿ ಹಿಡಿದರೇನು, ಅಭಯಾರಣ್ಯದಲ್ಲಿ ಬಿಡುತ್ತಾರೆ ಎಂಬ ಧೈರ್ಯ ಅವಕ್ಕೆ.

ಚಿರತೆ ನಿಜಕ್ಕೂ ಮನುಷ್ಯನನ್ನು ತಿನ್ನುತ್ತದೆಯೇ? ಅಂತಹ ಚಾಳಿ, ದುರಭ್ಯಾಸ ಅದು ಯಾವಾಗ ಮಾಡಿಕೊಂಡಿತು? ಅವಕ್ಕೂ ಕಾಲರ್ ಹಾಕಿದ್ದಿದ್ದರೆ ಕಾಲರ್ ಪಟ್ಟಿ ಹಿಡಿದು ಕೇಳಬಹುದಿತ್ತು. ಮನುಷ್ಯ ಮನುಷ್ಯನನ್ನು ಕಚ್ಚಿ, ಕೊಚ್ಚುವುದನ್ನು ನೋಡಿದಾಗ ಪ್ರಾಣಿಗಳಾದ ನಾವು ಯಾಕೆ ಕಚ್ಚಬಾರದು? ಹಾಗೆ ಕಚ್ಚಿದ್ದನ್ನು ವೇಸ್ಟ್ ಆಗದಂತೆ ಏಕೆ ತಿನ್ನಬಾರದು ಎಂದು ಯೋಚಿಸಿರಬೇಕು. ತಾನು ತಿನ್ನುವ ಬೌ ಬೌ ಬಿರಿಯಾನಿಯನ್ನು ಕೆಲವರು ಮನುಷ್ಯರಿಗೂ ತಿನ್ನಿಸಿ ನಮ್ಮ ಆಹಾರ ಖಾಲಿಯಾಗುತ್ತಿದೆ ಎಂಬ ಕೆಟ್ಟ ಸೇಡುಮಿಶ್ರಿತ ಕೋಪವೂ ಅವಕ್ಕಿರಬಹುದು. ಇನ್ನು ರಸ್ತೆ, ಟೌನ್ ಹಾಲ್ ಮುಂದೆ ಅಲ್ಲಿ ಇಲ್ಲಿ ಬಹಿರಂಗವಾಗಿ ಮಾಂಸ ತಿನ್ನುವ ಜನರನ್ನು ನೋಡಿ ನಾವೂ ಎಲ್ಲಿ ಏನು ತಿಂದರೂ ನಡೆಯುತ್ತದೆ ಎಂಬ ಭಂಡ ಧೈರ್ಯ ಬಂದಿರಬಹುದು.


ಮೊನ್ನೆ ನಮ್ಮೂರ ಚೆನ್ನಕೇಶವ ದೇವಸ್ಥಾನದ ಹಿಂಬದಿಯ ಪೊದೆಯಲ್ಲಿ ಚಿರತೆ ಕಾಣ್ತು ಎಂದು ಯಾರೋ ಹೇಳಿದ್ದಷ್ಟೇ, ಅದು ಇಡೀ ಊರಿಗೇ ಗುಲ್ಲಾಯಿತು. ದೇವಸ್ಥಾನದ ಹಿಂಬದಿಯ ಬೇಲಿಸಾಲಿನಲ್ಲಿ ಸಾಗಿದರೆ ಅದು ಕೆರೆಯ ಅಂಗಳದುದ್ದಕ್ಕೂ ಹರಡಿ ನಿಂತ ಎಕರೆಗಟ್ಟಲೆ ತೋಟಗಳಲ್ಲಿ ಎಲ್ಲಿಯಾದರೂ ಸ್ವಚ್ಛಂದವಾಗಿ ವಿಹರಿಸುವ ಅವಕಾಶವಿತ್ತು. ಊರ ಜನ ತೋಟದ ಕಡೆ ಹೋಗಲೇ ಹಿಂದುಮುಂದು ನೋಡುವಂತಾಯಿತು. ಮಹಾನ್ ಶಕ್ತಿಶಾಲಿಗಳು, ಮೊಲ, ಹಂದಿ, ಕಾಡುಕೋಳಿ ಹೊಡೆದು ಮೀಸೆ ತಿರುವುತ್ತಿದ್ದ ಬೇಟೆಯ ಶೂರರು ಎನಿಸಿಕೊಂಡ ಕೆಲವರು ನೆಂಟರ ಮನೆಗೆ, ಮಗಳ ಮನೆಗೆ ಹೋಗಿ ಬರ್ತೀವಿ ಅಂತ ಹೋದ್ರು. ಇನ್ನೊಂದಷ್ಟು ಜನ ಹೆಲ್ತ್ ಚೆಕಪ್ ಮಾಡುಸ್ಕಂಡು ಬತ್ತೀವಿ ಅಂತ ಬೆಂಗಳೂರು ಬಸ್ ಹತ್ತುದ್ರು. ಇನ್ನು ಕೆಲವರು ಯಾವುದ್ಯಾವುದೋ ಜಾತ್ರೆ, ಪರಿಷೆ, ಮುಳಕಟ್ಟಮ್ಮನ ಹಬ್ಬ ಅಂತ ನೆವ ಹುಡುಕ್ಕಂಡು ಊರು ಬಿಟ್ಟು ಹೋದರು. ಊರಲ್ಲಿಲ್ಲದ್ದರಲ್ಲವಾ ತೋಟಕ್ಕೆ ಹೋಗಬೇಕಾಗುವುದು? ಇಂತಹ ಸಂಕಟದ ಸಮಯದಲ್ಲಿ ನನ್ನ ಹೆಂಡತಿ 'ತೋಟಕ್ಕೆ ಹೋಗಿ ಬರೋಣ, ತುಂಬಾ ದಿನಗಳಾಯಿತು' ಎಂಬ ವಿಚಿತ್ರ ಬಯಕೆ ಮುಂದಿಟ್ಟಳು.

'ನೀನು ಹೋಗಿ ಬಾ, ನನಗೆ ತುಂಬಾ ಕೆಲಸವಿದೆ' ಎಂದು ಜಾರಿಕೊಳ್ಳಲು ಪ್ರಯತ್ನಿಸಿದೆ. 'ಇಲ್ಲ ನೀವೂ ಬನ್ನಿ, ಚಿರತೆ ಓಡಾಡ್ತಿದೆಯಂತೆ' ಅಂದಳು. 'ಮತ್ತೆ ಅದು ಹೋದ ಮೇಲೆ ತೋಟದ ಕಡೆ ಹೋದರಾಯಿತು, ಇಷ್ಟಕ್ಕೂ ಅಲ್ಲಿ ಕಾಯಿಗಿಂತ ಹೆಚ್ಚಾಗಿ ಕುರುಂಬಾಳೆ, ಹೆಡೆಮೊಟ್ಟೆಯೇ ಉದುರುತ್ತದೆ' ಎಂದೆ. 'ಮನುಷ್ಯ ಯಾವಾಗಲೂ ಉಪಯೋಗಕ್ಕೆ ಬಾರದ್ದನ್ನೇ ಉದುರಿಸುತ್ತಾನೆ. ವರ್ಷವೆಲ್ಲಾ ಕಾಯಿ ಕೊಡುವ ಮರ ಒಂದೆರಡು ಹೆಡೆಮೊಟ್ಟೆ ಉದುರಿಸಬಾರದಾ? ಸುಮ್ಮ ನನ್ನ ಜೊತೆ ಬನ್ನಿ' ಎಂದಳು. ನನಗೇ ನಾನು ಚಿರತೆ ಓಡಿಸುತ್ತೇನೆ ಎಂಬ ನಂಬಿಕೆ ಇರಲಿಲ್ಲ. ಹೋಗಲೆಂದರೆ ಚಿರತೆ ನನ್ನನ್ನು ನೋಡಿದ ಕೂಡಲೇ ಹೆದರಿ ಓಡುವಷ್ಟು ಆಜಾನುಬಾಹು ಫ್ಯಾಂಟಮ್, ಹಲ್ಕ್ ಬಾಡಿಯೂ ನನ್ನದಲ್ಲ. ಮಾಮೂಲಿ ಸಂಸಾರದ ಜಂಜಡದಲ್ಲಿ ಕರಗಿ ಕೃಶವಾದ ಡಯಾಬಿಟೀಸ್ ಅಂಚಿನ ಕೆಎಸ್‌ಆರ್ಟಿಸಿ ಹಳೇ ಬಸ್ಸಿನಂತಹ ಎಲ್ಲಾ ಅಲ್ಲಾಡುವ ಬಾಡಿ ನನ್ನದು. ಅಂದ ಮೇಲೆ ನನ್ನ ಕಂಡರೆ ಚಿರತೆ ಹೆದರುತ್ತದೆ ಎಂದಾಗಲೀ, ಅಥವಾ ನಾನು ಅದರ ಜೊತೆ ಫೈಟ್ ಮಾಡಬಲ್ಲೆ ಎಂದಾಗಲಿ ನನ್ನ ಹೆಂಡತಿ ಹೇಗೆ ನಿರ್ಧರಿಸಿದಳು ಎಂದು ಅರ್ಥವಾಗಲಿಲ್ಲ.

ಚಿರತೆಗೆ ಒಬ್ಬರ ಮೇಲೆ ಅಟ್ಯಾಕ್ ಮಾಡುವ ಬದಲು ಒಂದು ಆಪ್ಷನ್ ಇರಲಿ ಎಂದುಕೊಂಡಿರಬಹುದು. ಅಥವಾ ನನ್ನಲ್ಲಿ ಧೈರ್ಯ ತುಂಬಲೂ ಇರಬಹುದು. ನನ್ನ ಹೆಂಡತಿ ರೇಖಾಗೆ ಮೊದಲೇ ಪಕ್ಷಿ ಪ್ರಾಣಿಗಳೆಂದರೆ ಇನ್ನಿಲ್ಲದ ಅಕ್ಕರೆ! ಯಾವ ಜೀವಿಯನ್ನೂ ನೋಯಿಸಿದವಳಲ್ಲ. ಇವಳ ಮೃದು ಮನಸ್ಸನ್ನು ಅರಿತೋ ಏನೋ ಕಷ್ಟಗಳು ದಂಡು ದಂಡಾಗಿ ಬಂದು ನಮ್ಮ ಮನೆಯಲ್ಲಿ ಗೂಡುಕಟ್ಟುತ್ತಿದ್ದವು. ಮನೆಯಲ್ಲಿ ಸಾಕಿಕೊಂಡಿರುವ ಬೆಕ್ಕಿನಂತೆ ಚಿರತೆಗಳೂ ಇವಳನ್ನು ಮೂಸಿ ಬಾಲ ಉಜ್ಜಿ ತಮ್ಮ ಪಾಡಿಗೆ ತಾವು ಹೋದರೂ ಹೋಗಬಹುದು. ಈ ಸಂದರ್ಭದಲ್ಲಿ ನಿಮಗೆ ನಮ್ಮ ಚಿರತೆ ಕೃಷ್ಣಪ್ಪನವರ ಬಗ್ಗೆ ಹೇಳಲೇಬೇಕು.

ನಮ್ಮ ಚಿರತೆ ಕೃಷ್ಣಪ್ಪನವರು ಕೆಂದಂಬಾಡಿ ಜತ್ತಪ್ಪ ರೈ ಅವರಿಗಿಂತ ರಸವತ್ತಾಗಿ ಬೇಟೆಯ ನೆನಪುಗಳನ್ನು ಹೇಳುತ್ತಿದ್ದರು. ಹೀಗೇ ಒಮ್ಮೆ ಸಂಜೆ ತೋಟದಲ್ಲಿ ಚಿರತೆಯೊಂದು ಅಟ್ಟಿಸಿಕೊಂಡು ಬಂತಂತೆ. ಇವರು ಜಿಂಕೆಯಂತೆ ಓಡಿ ಒಂದು ಮಾವಿನ ಮರ ಹತ್ತಿ ಕೊಂಬೆಯೊಂದರ ಮೇಲೆ ಕುಕ್ಕರಗಾಲಲ್ಲಿ ಕೂತುಬಿಟ್ಟರಂತೆ! ಸ್ವಲ್ಪ ಹೊತ್ತಾದ ಮೇಲೆ (ಇವರು ತುಂಬಾ ಫಾಸ್ಟಾಗಿ ಓಡಿದ್ದರಿಂದ ಚಿರತೆ ನಿಧಾನವಾಗಿ ಬಂದಿರಬಹುದು) ಚಿರತೆ ಮರದ ಹತ್ತಿರ ಬಂದು ಇವರನ್ನು ನೋಡಿ ಗುರುಗುಟ್ಟಿತಂತೆ! ಇನ್ನೇನು ಚಿರತೆಯೂ ಮರ ಹತ್ತೇಬಿಟ್ಟಿತು ಎನ್ನುವಾಗ ನೋಡುತ್ತಾರಂತೆ, ಅವರ ಮೊಣಕಾಲುಮತ್ತು ತೊಡೆಯ ಆಯಕಟ್ಟಿನ ಪ್ರದೇಶಕ್ಕೆ ಸಿಲುಕಿ ನಾಗರಹಾವೊಂದು ಹಾಗೇ ಅಪ್ಪಚ್ಚಿಯಾಗಿ ಅಸುನೀಗಿತ್ತಂತೆ.

ಕೃಷ್ಣಪ್ಪ ಥಟ್ಟನೆ ಆ ಹಾವನ್ನು ತೆಗೆದು ಚಿರತೆ ಮೇಲೆ ಎಸೆದರಂತೆ! ಚಿರತೆ ಹೆದರಿ ಓಟ ಕಿತ್ತಿತಂತೆ! ಆ ನಂತರ ಯಾವುದೇ ಚಿರತೆ ಬಂದರೂ ಬೆಕ್ಕಿನ ತರ ಇವರನ್ನು ಮೂಸಿ ಬಾಲ ಉಜ್ಜಿ ಹೋಗುತ್ತಿತ್ತಂತೆ! ಚಿರತೆಯ ತಲೆ ಸವರುವ ಫೋಟೊ ಒಂದಕ್ಕೆ ಕಟ್ಟು ಹಾಕಿಸಿ ಅವರ ಮನೆಯ ಮೂರೂ ಅಂತಸ್ತಿನಲ್ಲಿ ತೂಗು ಹಾಕಿದ್ದರು ಕೃಷ್ಣಪ್ಪ. ಯಾವ ಸರ್ಕಸ್ ಕಂಪನಿಯವರಿಗೆ ಸೀಸಿ ಹೊಡೆದು ಚಿರತೆಯ ತಲೆ ಸವರಿ ಫೋಟೊ ತೆಗೆಸಿಕೊಂಡಿದ್ದರೋ ದೇವರಿಗೇ ಗೊತ್ತು. ಕೃಷ್ಣಪ್ಪನವರಿಗಾದಂತೆ ಯಾವುದಾದರೂ ಮಿರಾಕಲ್ ನಡೆಯಬಹುದು ಎಂದು ದೇವರ ಮೇಲೆ ಭಾರ ಹಾಕಿ ಹೆಂಡತಿಯ ಜೊತೆ ತೋಟಕ್ಕೆ ಹೊರಟೆ.



ಪ್ರತಿಕ್ರಿಯಿಸಿ: feedback@sudha.co.in